

# ವಿಶ್ವದ ಅಪರೂಪದ ಕಲ್ಲುಸಂಕಕ್ಕೆ ಕುತ್ತು?

■ ಕಲಗಾರು ಲಕ್ಷ್ಮೀನಾರಾಯಣ ಹೆಗಡೆ

**ವರದಾನದಿಗೆ ಸೇರುವ ಹೊಳೆಗೆ ಪ್ರಾಕೃತಿಕವಾಗಿ ನಿರ್ಮಾಣಗೊಂಡ ಸೇತುವೆ ವಿಶ್ವದ ಅಪರೂಪದ ಭೂರಚನೆಗಳಲ್ಲೊಂದು. ಆದರೆ, ಈ ವಿಸ್ಮಯ ಸ್ಥಳೀಯ ಜನಪ್ರತಿನಿಧಿಗಳ ಕೃಪಾಕಟಾಕ್ಷಕ್ಕೆ ಒಳಗಾಗಿಲ್ಲ. ಆದರ ಪರಿಣಾಮವಾಗಿ, ನಮ್ಮ ಹೆಮ್ಮೆಗೆ ಕಾರಣವಾಗಬೇಕಿದ್ದ ಈ ಪ್ರಾಕೃತಿಕ ಕಲ್ಲುಸಂಕ ಮಣ್ಣಾಗಿ ಹುಡಿಯಾಗುವ ಸಾಧ್ಯತೆ ತಲೆದೋರಿದೆ.**

ಜಗತ್ತಿನ ಅಪರೂಪದ ಭೂ ವೈಜ್ಞಾನಿಕ ವಿಸ್ಮಯಗಳಲ್ಲೊಂದಾದ ಪ್ರಕೃತಿ ನಿರ್ಮಿತ ಶಿಲಾ ಸೇತು ಅವಸಾನದ ಅಂಚಿನಲ್ಲಿದೆ. ಅದರ ಉಳಿವಿನ ಪ್ರಯತ್ನವಾಗದಿದ್ದರೆ ಶಿಲಾ ಸೇತು ಒಡೆದು ಬಂಡೆಯಾಗುವ ದಿನಗಳು ದೂರವಿಲ್ಲ.

ಜೋಗ ಜಲಪಾತಕ್ಕೆ ಅತಿ ಸನಿಹದಲ್ಲಿ, ಸೀತೆ ಕಟ್ಟೆ ಸೇತುವೆಯಿಂದ ಕೇವಲ 3 ಕಿ.ಮೀ. ಅಂತರದಲ್ಲಿ ಜಗತ್ತಿನ ಅಪರೂಪದ ಭೂ ವೈಜ್ಞಾನಿಕ ವಿಸ್ಮಯಗಳಲ್ಲೊಂದಾದ ಪ್ರಕೃತಿ ನಿರ್ಮಿತ ಶಿಲಾ ಸೇತು ಇದೆ. ಶಿವಮೊಗ್ಗ – ಉತ್ತರಕನ್ನಡ ಜಿಲ್ಲೆಯ ಗಡಿಭಾಗದಲ್ಲಿ ಈ ನಿಸರ್ಗ ನಿರ್ಮಿತ ಶಿಲಾ ಸೇತುವೆ ಇದ್ದು, ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಮನಮನೆ ಗ್ರಾಮ ಪಂಚಾಯತಿ ಮಲವಳ್ಳಿ ಗ್ರಾಮದ ವ್ಯಾಪ್ತಿಗೆ ಸೇರಿರುತ್ತದೆ. ಇದು ವಿಶ್ವವಿಖ್ಯಾತ ಜೋಗ ಜಲಪಾತಕ್ಕೆ ಕೇವಲ 5 ಕಿ.ಮೀ. ದೂರದಲ್ಲಿದ್ದು, ರಾಷ್ಟ್ರೀಯ ಹೆದ್ದಾರಿ 206ರಲ್ಲಿ ಆಡುಕಟ್ಟ–ಮನಮನೆಯ ಮಧ್ಯದಲ್ಲಿದೆ. ಸ್ಥಳೀಯರು ಇದನ್ನು ಕಲ್ಸಂಕ (ಕಲ್ಲಿನ ಸಂಕ) ಎಂದು ಕರೆಯುತ್ತಾರೆ.

ಕಲಗಾರಿನಲ್ಲಿ ಹುಟ್ಟಿ ಮುಂದೆ ವರದಾನದಿಗೆ ಸೇರುವ ಹೊಳೆಗೆ ಪ್ರಾಕೃತಿಕವಾಗಿ ನಿರ್ಮಾಣಗೊಂಡ ಸೇತುವೆ ಇದು. ಸಾವಿರಾರು ವರ್ಷಗಳ ಪಕ್ರಿಯೆಯಲ್ಲಿ ಹೊಳೆಗೆ ಅಡ್ಡವಾಗಿದ್ದ ಲ್ಯಾಟ್ರೇಟ್ ಶಿಲಾ ಪದರದ ಕೆಳಭಾಗದ ಮಣ್ಣು ಕೊಚ್ಚಿ ಹೋಗಿ, ಮೇಲ್ಭಾಗದ ಗಟ್ಟಿ ಪದರು ಉಳಿದು ಇಲ್ಲಿ ಸೇತುವೆಯಂತಹ ರಚನೆ ಉಂಟಾಗಿದೆ. ಇದು ಸುಮಾರು 45 ಅಡಿ ಉದ್ದ, 4ರಿಂದ 6 ಅಡಿ ಅಗಲವಿದೆ. 2ರಿಂದ 3